**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 585/2023**

| | | | |
|---|---|---|---|
| **ಹೆಸರು** | : | **ಬಕ್ಕಮ್ಮ** | ಚಾ.ಸಾ.1 |
| **ಗಂಡನ ಹೆಸರು** | : | **ಮಡೇಪ್ಪ** | ಪ್ರಾ.ಸಾ.1 |
| **ವಯಸ್ಸು** | : | **60 ವರ್ಷ** | ದಿನಾಂಕಃ 25-03-2025 |
| **ಉದ್ಯೋಗ** | : | **ಕೂಲಿ ಕೆಲಸ** | |
| **ವಾಸಸ್ಥಳ** | : | **ಮೋಘಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ಗಂಡ. ಚಾಸಾ-3 ರಿಂದ 6 ರವರು ನಮ್ಮ ಊರಿನವರು. 1 ರಿಂದ 3ನೇ ಆರೋಪಿತರು ನಮ್ಮ ಊರಿನವರು. 4 ಮತ್ತು 5ನೇ ಆರೋಪಿತರು ಸುಲೇಪೇಟ ಗ್ರಾಮದವರು ಮತ್ತು 1ನೇ ಆರೋಪಿಯ ಅಳಿಯಂದಿರು.

ಈಗ 1.5 ವರ್ಷಗಳ ಹಿಂದೆ ರಾತ್ರಿ 7 ಗಂಟೆ ಸುಮಾರಿಗೆ ನನ್ನ ಗಂಡನಾದ ಚಾಸಾ-2ರವರು ನಮ್ಮ ಮನೆಯ ಮುಂದೆ ಇರುವ ಕಟ್ಟೆಯ ಮೇಲೆ ಕುಳಿತಿದ್ದು ನಾನು ಮನೆಯ ಒಳಗೆ ಇದ್ದಾಗ 1ನೇ ಆರೋಪಿ ಮದ್ಯಪಾನ ಸೇವಿಸಿ ಅವಾಚ್ಯ ಶಬ್ದಗಳಿಂದ ಚಾಸಾ-2ರವರಿಗೆ ಬೈಯುತ್ತಾ ಹೋಗುವಾಗ ಆಗ ಚಾಸಾ-2ರವರು 1ನೇ ಆರೋಪಿಗೆ ಯಾಕೆ ಬೈಯುತ್ತಿದಿಯಾ ಎಂದು ಕೇಳಿದಾಗ 1ನೇ ಆರೋಪಿ ಚಾಸಾ-2ರವರಿಗೆ ಹೊಟ್ಟೆಯ ಮೇಲೆ ಒದ್ದಿರುತ್ತಾರೆ. ಆಗ ನಾನು ಮನೆಯಿಂದ ಹೊರಗೆ ಬಂದು ಯಾಕೆ ಹೋಡೆಯುತ್ತಿದ್ದಿರಾ ಎಂದು ಕೇಳಿದಾಗ 1 ರಿಂದ 3ನೇ ಆರೋಪಿತರು ನನಗೆ ರಂಡಿ, ಬೋಸಡಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ 4 ಮತ್ತು 5ನೇ ಆರೋಪಿತರು ಸಹ ಬಂದು ಚಾಸಾ-2ರವರಿಗೆ ಕೇಳಗೆ ಹಾಕಿ ಹೊಟ್ಟೆ ಮೇಲೆ ಒದ್ದಿರುತ್ತಾರೆ. ನಂತರ ಚಾಸಾ-3 ಹಾಗೂ ಸಚಿನರವರು ಬಂದು ಜಗಳ ಬೀಡಿಸಿರುತ್ತಾರೆ. ಮರುದಿನ ಬೆಳಗ್ಗೆ 9 ಗಂಟೆಗೆ ಗುಲಬರ್ಗಾ ಸರಕಾರಿ ಆಸ್ಪತ್ರೆಗೆ ಹೊಗಿ ಚಾಸಾ-2ರವರ ಹೊಟ್ಟೆ ಉಬ್ಬಿದ ಕಾರಣ ಚಿಕಿತ್ಸೆ ಪಡೆದಿರುತ್ತೇವೆ. ಆಸ್ಪತ್ರೆಯಲ್ಲಿ 15 ದಿನಗಳ ಕಾಲ ಉಳಿದುಕೊಂಡು 15 ದಿನಗಳ ನಂತರ ರಟಕಲ ಪೋಲಿಸ ಠಾಣೆಗೆ ಹೋಗಿ ಪ್ರಕರಣವನ್ನು ದಾಖಲಿಸಿದ್ದೇನೆ. ಈಗ ನೋಡುತ್ತಿರುವ ದೂರು ನಾನೇ ನೀಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೆ. ಸದರಿ ದೂರನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರು ನೀಡಿದ 1 ತಿಂಗಳ ನಂತರ ಪೋಲಿಸರು ಪಂಚನಾಮೆ ಮಾಡಲು ನಮ್ಮ ಮನೆಗೆ ಬಂದಿದ್ದರು. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-2 ಎಂದು

ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ನನ್ನ ಸಹಿಯನ್ನು ನಾನು ಪ್ರಕರಣ ದಾಖಲಿಸಿದ ಕಾರಣ ಠಾಣೆಯಲ್ಲಿ ಪಡೆದಿದ್ದಾರೆ. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು. ನಾನು ದೂರು ನೀಡಿದ 1 ತಿಂಗಳ ನಂತರ ಪೋಲಿಸರು ನಮ್ಮ ಮನೆಗೆ ಬಂದಾಗ ಭಾವಚಿತ್ರವನ್ನು ಪಡೆದಿದ್ದಾರೆ. ನಿಪಿ-3ರಲ್ಲಿ ಯಾರು ಇದ್ದಾರೆ ಎಂದು ನನಗೆ ನೆನಪಿಲ್ಲ. ಸಾಕ್ಷಿಗೆ ನಿಪಿ-3ನ್ನು ತೋರಿಸಿ ಕೇಳಿದಾಗ ಸಾಕ್ಷಿ ನಿಪಿ-3ರಲ್ಲಿ ಒಬ್ಬ ವ್ಯಕ್ತಿಯ ಹೆಸರು ಅರ್ಜುನ ಇರುತ್ತದೆ ಮತ್ತು ಇನ್ನೊಬ್ಬ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 1, 2 ಮತ್ತು 4ನೇ ಆರೋಪಿತರು ನೋಡಿ ಗುರುತ್ತಿಸುತ್ತಾರೆ. ಸಾಕ್ಷಿ ಮುಂದುವರೆದು ನ್ಯಾಯಾಲಯದ ಮುಂದೆ ಇನ್ನು ಎರಡು ಆರೋಪಿತರು ಗೈರು ಹಾಜರಿರುತ್ತಾರೆ ಎಂದು ನುಡಿಯುತ್ತಾರೆ. ಗೈರು ಹಾಜರಿರುವ 3 ಮತ್ತು 5ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿತರನ್ನು ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ)

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಸಿ.ಎಸ್ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**